ಕಛೇರಿ : +91 80 2287 4039
+91 80 2235 4085
ಫ್ಯಾಕ್ಸ್ : +9180 2228 5591
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಸಂಖ್ಯೆ: : DD/ದಂತ/OFFICE/01/2017-18/No-2020-21/05 ದಿನಾಂಕ: 24.08.2020

::ಸುತ್ತೋಲೆ::

ವಿಷಯ: ದಂತ ಭಾಗ್ಯ ಯೋಜನೆಯಡಿಯಲ್ಲಿ ಮಾಡಿಕೊಂಡಿರುವ ಒಡಂಬಡಿಕೆಯನ್ನು ಮುಂದುವರೆಸುವ ಬಗ್ಗೆ.

ಉಲ್ಲೇಖ: ಆಕುಕ 114 ಸಿಜಿಎಂ 2014, ದಿನಾಂಕ:30.03.2015.

******

ರಾಜ್ಯದಲ್ಲಿ ದಂತ ಮತ್ತು ಬಾಯಿಯ ಆರೋಗ್ಯ ರಕ್ಷಣೆಗೆ ರಾಜ್ಯ ಸರ್ಕಾರವು "ಓರಲ್ ಹೆಲ್ತ್ ಪಾಲಿಸಿ"ಯನ್ನು 2014-15ನೇ ಸಾಲಿನಲ್ಲಿ ಜಾರಿಗೆ ತಂದಿದ್ದು, ಈ ಯೋಜನೆಯ ಒಂದು ಭಾಗವಾಗಿ ರಾಜ್ಯದಲ್ಲಿರುವ, ಬಿ.ಪಿ.ಎಲ್ ವರ್ಗಕ್ಕೆ ಸೇರಿದ 45 ವರ್ಷ ಮೇಲ್ಪಟ್ಟ ನಾಗರಿಕರಿಗೆ ಸಂಪೂರ್ಣ ದಂತ ಪಂಕ್ತಿ ಮತ್ತು 3 ಅಥವಾ ಅದಕ್ಕಿಂತ ಹೆಚ್ಚು ಹಲ್ಲುಗಳನ್ನು ಕಳೆದುಕೊಂಡವರಿಗೆ ಉಚಿತವಾಗಿ ಕೃತಕ ದಂತಪಂಕ್ತಿ ನೀಡಲು ಕರ್ನಾಟಕ ಸರ್ಕಾರದ ಆರೋಗ್ಯ ಇಲಾಖೆ ಮತ್ತು ರಾಜ್ಯದಲ್ಲಿರುವ 45 ದಂತ ವೈದ್ಯ (43 ಖಾಸಗಿ ಮತ್ತು 2 ಸರ್ಕಾರಿ) ಕಾಲೇಜುಗಳ ಸಹ ಭಾಗಿತ್ವದಲ್ಲಿ ರಾಜ್ಯ ಸರ್ಕಾರವು "ದಂತ ಭಾಗ್ಯ" ಯೋಜನೆಯನ್ನು ಜಾರಿಗೆ ತಂದಿದೆ.

ಮೇಲ್ಕಂಡ ಉಲ್ಲೇಖದನ್ವಯ ದಂತ ಭಾಗ್ಯ ಯೋಜನೆಯಡಿಯಲ್ಲಿ, 45 ದಂತ ಮಹಾ ವಿದ್ಯಾಲಯಗಳೊಂದಿಗೆ (43 ಖಾಸಗಿ ಮತ್ತು 2 ಸರ್ಕಾರಿ) 5 ವರ್ಷಗಳಿಗೆ ಒಡಂಬಡಿಕೆಯನ್ನು ಮಾಡಿಕೊಂಡು ಯೋಜನೆಯನ್ನು ನಡೆಸಲಾಗುತ್ತಿದೆ. ದಂತ ಭಾಗ್ಯ ಯೋಜನೆಯಲ್ಲಿ ಈಗಾಗಲೇ ಭಾಗಿಯಾಗಿರುವ ದಂತ ಮಹಾ ವಿದ್ಯಾಲಯಗಳು 5 ವರ್ಷ ಪೂರ್ಣಗೊಂಡಲ್ಲಿ, ಸದರಿ ದಂತ ಮಹಾ ವಿದ್ಯಾಲಯಗಳು ಮುಂದಿನ ಆದೇಶದವರೆಗೆ ಯೋಜನೆಯಲ್ಲಿ ಮುಂದುವರೆಸಬೇಕಾಗಿ ಈ ಮೂಲಕ ಸೂಚಿಸಿದೆ.

ಆಯುಕ್ತರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.

ಪ್ರತಿಯನ್ನು:

1. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ.
2. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.
3. ಸಂಬಂಧಪಟ್ಟ ದಂತ ಮಹಾ ವಿದ್ಯಾಲಯಗಳ ಪ್ರಾಂಶುಪಾಲರು/ಡೀನ್.
4. ವಿಭಾಗೀಯ ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಕಲಬುರುಗಿ.
5. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ಜಿಲ್ಲಾ ಶಸ್ತ್ರ ಚಿಕಿತ್ಸಕರು.
6. ಎನ್‌ಓಹೆಚ್‌ಪಿ ವಿಭಾಗೀಯ ನೋಡಲ್ ಅಧಿಕಾರಿಗಳು ಹಾಗೂ ಜಿಲ್ಲಾ ಎನ್‌ಓಹೆಚ್‌ಪಿ ಕಾರ್ಯಕ್ರಮಾಧಿಕಾರಿಗಳು.
7. ಕಛೇರಿ ಪ್ರತಿ.

PROF., & H.O.D
Department of Prosthodontics
Crown and Bridge
SRI SIDDHARTHA DENTAL COLLEGE
AGALAKOTE, B. H. ROAD, TUMKUR-572102

3ನೇ ಮಹಡಿ, ಐಪಿಪಿ ಕಟ್ಟಡ, ಆನಂದ್ ರಾವ್ ವೃತ್ತ, ಬೆಂಗಳೂರು - 560 009.